ಓಸ್. ನಂ. 226/2015
ಪಿಡಬ್ಲ್ಯು :2

ಸಾಕ್ಷಿಗೆ ಇಂದು ದಿನಾಂಕ 12/06/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು: ಶ್ರೀ. ಎಸ್ ಜಿ ಕೆ ವಕೀಲರ ಪರವಾಗಿ ಶ್ರೀ. ಬಿ. ಕೆ ಎಮ್ ವಕೀಲರಿಂದ ಪ್ರತಿವಾದಿ ಪರವಾಗಿ :**

1. ವಾದಿ ನಂ. 1 ಮತ್ತು 3 ಮತ್ತು ಪ್ರತಿವಾದಿ ನಂ. 1 ಇವರು ನಮ್ಮ ಅಕ್ಕ-ತಮ್ಮಂದಿರು ಎಂದರೆ ಸರಿ. ಪ್ರತಿವಾದಿ ನಂ. 1 ರವರಿಗೆ ಒಬ್ಬರೇ ಹೆಂಡತಿ ಇರುತ್ತಾರೆ. ಪ್ರತಿವಾದಿ ನಂ. 1 ರವರಿಗೆ ಎಷ್ಟು ಜನ ಮಕ್ಕಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ. 6 ಯಾರು ಎಂದು ನನಗೆ ಗೊತ್ತಿಲ್ಲ. ನನಗೆ ದಾವಾ ಆಸ್ತಿಯ ಸರ್ವೆ ನಂಬರ ಹೇಳಲು ಆಗುವುದಿಲ್ಲ. ದಾವಾ ಆಸ್ತಿಯು 12 ವರೆ ಎಕರೆ ಇರುತ್ತದೆ. ಪ್ರತಿವಾದಿ ನಂ. 1 ರವರಿಗೆ ಯಾವಾಗ ಮತ್ತು ಎಷ್ಟು ವರ್ಷದ ಹಿಂದೆ ಮದುವೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.ಸಾಕ್ಷಿ ಮುಂದುವರಿದು ಅಂದಾಜು 20 ವರ್ಷಗಳ ಹಿಂದೆ ಆಗಿರಬಹುದು ಎಂದು ನುಡಿಯುತ್ತಾರೆ. ಪ್ರತಿವಾದಿ ನಂ. 1 ರವರು ಪ್ರತಿವಾದಿ ನಂ. 2 ತನ್ನ ಹೆಂಡತಿಯನ್ನು ಹೊಡೆಬಡಿ ಮಾಡಿ ಕಳಿಸಿರುತ್ತಾನೆ ಎಂದರೆ ಸರಿ. ಪ್ರತಿವಾದಿ ನಂ. 2 ರವರು ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ. 2 ರವರು ತವರು ಮನೆಗೆ ಹೋದ ನಂತರ ಪ್ರತಿವಾದಿ ನಂ. 1 ರವರು 5 ಎಕರೆ ಜಮೀನನ್ನು ತನ್ನ ಹೆಂಡತಿ ಮತ್ತು ಮಕ್ಕಳಾದ ಪ್ರತಿವಾದಿ ನಂ. 2 ರಿಂದ 5 ರವರ ಹೆಸರಿಗೆ ಬಿಟ್ಟುಕೊಟ್ಟಿರುತ್ತಾನೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ. 1 ರವರು ಪ್ರತಿವಾದಿ ನಂ. 2 ರವರನ್ನು ಹೊಡೆಬಡಿ ಮಾಡಿ ಹೊರಗೆ ಹಾಕಿದ ನಂತರ ಪ್ರತಿವಾದಿ ನಂ. 6 ಸುವರ್ಣ ಎನ್ನುವವರನ್ನು ಮದುವೆಯಾಗಿದ್ದು ಪ್ರತಿವಾದಿ ನಂ. 7 ತಿಪ್ಪರಾಯ ಎನ್ನುವ ಮಗನು ಹುಟ್ಟಿರುತ್ತಾನೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

(ಮುಂದುವರಿದ ಪಾಟೀಸವಾಲಿಗೆ  ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

1 ನೇ  ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.